ದಿಃ 27.03.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1129/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಿದ್ದೇಶ್ ನಾಯ್ಕ.ಕೆ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ಕೃಷ್ಣಾನಾಯ್ಕ | ಚಾ.ಸಾಃ 9 |
| ವಯಸ್ಸು | : | 36 ವರ್ಷ | |
| ಕೆಲಸ | : | ಅಬಕಾರಿ ನಿರೀಕ್ಷಕರು, ಹೂವಿನ ಹಡಗಲಿ ವಲಯ, ಹಡಗಲಿ ತಾಲ್ಲೂಕು | ಸಾ ಪ್ರ ಬೋ |
| ವಾಸ | : | ಹಡಗಲಿ | ದಿಃ27.03.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು ದಿನಾಂಕ 01.07.2019 ರಿಂದ 02.12.2023 ರವರೆಗೆ ಅಬಕಾರಿ ಉಪ ಆಯುಕ್ತರ ಕಚೇರಿ, ಚಿತ್ರದುರ್ಗದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 30.04.2023 ರಂದು ಅಬಕಾರಿ ಉಪ ಆಯುಕ್ತಕರು, ಚಿತ್ರದುರ್ಗ ರವರ ಮಾರ್ಗದರ್ಶನದಂತೆ ವಿಧಾನ ಸಭಾ ಚುನಾವಣೆಯ ನಿಮ್ಮಿತ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ನಾನು, ಚಾಸಾ-3 ಮತ್ತು 4 ರವರು ಹೊಳಲ್ಕೆರೆಯ ಚಿತ್ರಹಳ್ಳಿ ಗ್ರಾಮದ ಸುತ್ತ-ಮುತ್ತ ರಾತ್ರಿ 08.15 ರ ಸಮಯದಲ್ಲಿ ಗಸ್ತು ಕರ್ತವ್ಯವವನ್ನು ಮಾಡುತ್ತಿದ್ದೇವು. ನನಗೆ ಹೆಚ್.ಡಿ.ಪುರ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಸಾಗಟ ಮಾಡುತ್ತಿದ್ದಾನೆ ಎಂದು ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ. ನಂತರ ನಾನು ರವರು ಚಾಸಾ-3 ಮತ್ತು ಚಾಸಾ-4 ರವರನ್ನು ನಮ್ಮ ಇಲಾಖೆಗೆ ಸೇರಿದ ಕೆಎ-01-ಜಿ-5780 ರ ಜೀಪಿನಲ್ಲಿ ಹೆಚ್.ಡಿ.ಪುರ ಗ್ರಾಮದ ಪೆಟ್ರೋಲ್ ಬಂಕ್ ಎದುರಿನ ರಸ್ತೆಗೆ ಕರೆದುಕೊಂಡು ಹೋದೆವು. ನಾವೆಲ್ಲರೂ ಸದರಿ ಸ್ಥಳದಲ್ಲಿ ನಿಂತು ರಸ್ತೆ ಗಾವಲು ಮಾಡುತ್ತಿದ್ದಾಗ, ಒಂದು ವಾಹನದ ಬಂದಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಿ ಆತನ ಹೆಸರನ್ನು ಕೇಳಲಾಗಿ ಲೋಕೇಶ್ ಬಿನ್ ಚಿಕ್ಕರಪ್ಪ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಕೆಎ-16-ಡಬ್ಲ್ಯೂ-4129 ರ ಟಿವಿಎಸ್ ಸ್ಟಾರ್ ಸಿಟಿ ಬೈಕಿನಲ್ಲಿ ಬಂದಿದ್ದು, ಸದರಿ ಬೈಕನ್ನು ಪರಿಶೀಲಿಸಿ ನೋಡಲಾಗಿ, ಬಿಳಿ ಪ್ಲಾಸ್ಟಿಕ್ ಚೀಲ ಇತ್ತು. ದಾಳಿ ಮಾಡುವ ಕುರಿತು ನಾನು ಚಾಸಾ-1 ಮತ್ತು 2 ರವರಿಗೆ ನೋಟೀಸನ್ನು ನೀಡಿದ್ದು, ಶೋಧನಾ ಕಾರ್ಯ ಪ್ರಾರಂಭಿಸುವ ಪೂರ್ವದಲ್ಲಿ ಶೋಧನಾ ವಾರೆಂಟ್‌ನ್ನು ತಯಾರಿಸಿರುತ್ತೇನೆ. ನಂತರ

ದಿಃ 27.03.2026

ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 180 ಎಂ.ಎಲ್ 21 ಓ.ಟಿ ಟೇಟ್ರಾ ಪ್ಯಾಕೆಟ್ ಗಳು, 180 ಎಂ.ಎಲ್ 13 ಬ್ಯಾಕ್ ಪೈಪರ್ ಪೌಚುಗಳು ಇದ್ದು, ಒಟ್ಟು 06.120 ಲೀಟರ್ ಮದ್ಯ ಇತ್ತು. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳ ಪೈಕಿ ತಲಾ 8 ಪೌಚುಗಳನ್ನು ಮಾದರಿ ಪರೀಕ್ಷೆಗಾಗಿ ತೆಗೆದುಕೊಂಡು ರಾಸಾಯನಿಕ ಪರೀಕ್ಷಾ ವರದಿಗಾಗಿ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಹಾಕಿ ಅರಗಿನ ಸಹಾಯದಿಂದ ಸೀಲು ಮಾಡಿರುತ್ತಾರೆ. ನಂತರ ಮಾದರಿ ಚೀಟಿಗಳನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದು ಮುದ್ದೆ ಮಾಲಿಗೆ ಅಂಟಿಸಿರುತ್ತಾರೆ. ರಾತ್ರಿ 08.45 ರಿಂದ 10.00 ರವೆರೆಗೆ ಮಹಜರನ್ನು ಜರುಗಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳೊಂದಿಗೆ ಕಛೇರಿಗೆ ಬಂದಿದ್ದು, ಸ್ವ-ದೂರನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸ್ವ-ದೂರನ್ನು ನೋಡಿ ಗುರುತಿಸಿದ್ದು, ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನಿಪಿ-1 ರಿಂದ 5 ಮತ್ತು 7 ರ ದಾಖಲಾತಿಗಳಲ್ಲಿ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-1(ಬಿ), 2(ಸಿ), 3(ಸಿ), 4(ಸಿ), 5(ಡಿ), ಮತ್ತು 7(ಬಿ) ಎಂದು ಗುರುತಿಸಲಾಯಿತು. ಮುದ್ದೆ ಮಾಲು-1 ರಲ್ಲಿನ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಮತ್ತು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಟಿ.ಎಸ್.ಎಂ ವಕೀಲರಿಂದ</u>**

3. ನಮ್ಮ ಇಲಾಖಾ ಕಚೇರಿಯಿಂದ ಕೃತ್ಯ ನಡೆದ ಸ್ಥಳ ಯಾವ ದಿಕ್ಕಿಗೆ ಇದೆ ಎಂದು ಗೊತ್ತಿಲ್ಲ. ನಾವು ಚಿತ್ರದುರ್ಗದಿಂದ ಪ್ರಾರಂಭಗೊಂಡು ಜಾನಗೊಂಡ, ಕಣಿವೆಹಳ್ಳಿ ತಾಂಡ್ಯ, ಶಿವಗಂಗಾ ಮಾರ್ಗದಲ್ಲಿ ಗಸ್ತು ಕರ್ತವ್ಯ ಮಾಡಿಕೊಂಡು ಚಿತ್ರಹಳ್ಳಿ ಗ್ರಾಮಕ್ಕೆ ಹೋಗಿದ್ದೇವು. ಈ ಕುರಿತು ನಮ್ಮ ಇಲಾಖಾ ದಿನಚರಿಯಲ್ಲಿ ಚುನಾವಣಾ ಗಸ್ತು ಎಂದು ಉಲ್ಲೇಖ ಮಾಡಿರುತ್ತೇವೆ. ನಾವು ಗಸ್ತು ಕರ್ತವ್ಯ ಮಾಡಿಲ್ಲ ಎಂದರೆ ಸರಿಯಲ್ಲ. ವಿಧಾನ ಸಭಾ ಚುನಾವಣೆಯ ನೀತಿ ಸಂಹಿತೆ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಇತ್ತು ಎಂಬುದು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ರಾತ್ರಿ 08.45 ಕ್ಕೆ ಹೋಗಿರುತ್ತೇವೆ. ಸದರಿ ಸ್ಥಳದಿಂದ ಪೂರ್ವ ದಿಕ್ಕಿಗೆ ಹೆಚ್.ಡಿ.ಪುರ ಟಾರ್ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಮತ್ತಿಘಟ್ಟ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಹಾಗಾಗಿ ಸ್ಥಳದ ಕುರಿತು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ

ದಿಃ 27.03.2026

ಚಿಕ್ಕುಬಂದಿ ಪೂರ್ವಕ್ಕೆ ಹೆಚ್.ಡಿ.ಪುರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ಚಿತ್ರಹಳ್ಳಿಗೆ ಹೋಗುವ ರಸ್ತೆ, ಉತ್ತರಕ್ಕೆ ವೆಲ್ಡಿಂಗ್ ಶಾಪ್ ಮತ್ತು ದಕ್ಷಿಣಕ್ಕೆ ಇರುವ ಸ್ಥಳದ ಕುರಿತು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ರಸ್ತೆ ವಾಹನ ಸಂಚಾರದಿಂದ ಕೂಡಿರುತ್ತದೆ ಎಂದರೆ ಸರಿ. ಸದರಿ ಸ್ಥಳದ ಸುತ್ತ-ಮುತ್ತ ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ಪೆಟ್ರೋಲ್ ಬಂಕಿನ ಮಾಲೀಕರು ಮತ್ತು ಕೆಲಸಗಾರರ ಕುರಿತು ಗೊತ್ತಿಲ್ಲ. ಪೆಟ್ರೋಲ್ ಬಂಕ್ ಯಾವಾಗಲೂ ಸಹಾ ತೆರೆದಿರುತ್ತದೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡಾಗ ಬೈಕಿನ ಮಾಲೀಕತ್ವದ ಕುರಿತಾದ ದಾಖಲಾತಿಗಳು ಇರಲಿಲ್ಲ. ನಾನು ಸದರಿ ವಾಹನವನ್ನು ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ ಹಾಗಾಗಿ ಆ ಕುರಿತು ಚಾಸಾ-10 ರವರಿಗೆ ಮಾಹಿತಿ ಇದೆ. ನಾನು ಚಾಸಾ-2 ರಿಂದ 5 ರವರೊಂದಿಗೆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳ ಉತ್ಪಾದನಾ ದಿನಾಂಕ, ಘಟಕ ಮತ್ತು ಬ್ಯಾಚ್ ಸಂಖ್ಯೆ ಕುರಿತು ನನಗೆ ಮಾಹಿತಿ ಇಲ್ಲ. ನನ್ನ ಸಮಕ್ಷಮ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಹಾಗಾಗಿ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ